# ಹೃದಯದ ಶಾರ್ಟ್ ಸರ್ಕ್ಯೂಟ್‌ಗೆ ರೇಡಿಯೋ ತರಂಗಾಂತರ ಚಿಕಿತ್ಸೆ

## ■ ಫೋರ್ಟಿಸ್‌ನಲ್ಲಿ ಕೋಲ್ಕತ ಮೂಲದ ವ್ಯಕ್ತಿಗೆ ಯಶಸ್ವಿ ಶಸ್ತ್ರಚಿಕಿತ್ಸೆ ■ ಸಾವಿರ ಜನರಲ್ಲಿ ಒಬ್ಬರಿಗೆ ಕಾಣಿಸಿಕೊಳ್ಳುವ ರೋಗ

**ಬೆಂಗಳೂರು:** ಹೃದಯದ ಅಸಹಜ ಬಡಿತದಿಂದ ಬಳಲುತ್ತಿದ್ದ 32ರ ಯುವಕನಿಗೆ ಅತ್ಯಾಧುನಿಕ ಎಲೆಕ್ಟ್ರೋ ಫಿಸಿಯಾಲಜಿ ಚಿಕಿತ್ಸೆ ನೀಡಿದ ಕನ್ನಿಂಗ್‌ಹ್ಯಾಮ್ ರಸ್ತೆ ಫೋರ್ಟಿಸ್ ಆಸ್ಪತ್ರೆ ವೈದ್ಯರ ತಂಡ ಕಾಯಿಲೆ ಸಂಪೂರ್ಣ ಗುಣಪಡಿಸುವಲ್ಲಿ ಯಶಸ್ವಿ ಯಾಗಿದ್ದಾರೆ.

ಹೃದಯದ ತೊಂದರೆಗೆ ಸಿಲುಕಿ ಮಾರಣಾಂತಿಕ ಹಂತಕ್ಕೆ ತಲುಪಿದ್ದ ಕೋಲ್ಕತ ಮೂಲದ ಕೆ.ಆರ್. ಚೌಧರಿ ಇದೀಗ ಸಂಪೂರ್ಣ ಚೇತರಿಸಿಕೊಂಡಿದ್ದಾರೆ.

**ಏನಾಗಿತ್ತು?:** ಚೌಧರಿಗೆ 2 ವರ್ಷದ ಹಿಂದೆ ಮೊದಲ ಬಾರಿ ಹೃದಯದ ಬಡಿತ ಹೆಚ್ಚಾಗಿ ಸುಸ್ತು ಕಂಡು ಬಂದಿತ್ತು. ಗ್ಯಾಸ್ಟ್ರಿಕ್ ಸಮಸ್ಯೆ ಎಂದುಕೊಂಡು ಸುಮ್ಮನಿದ್ದರು. ನಂತರ ಪದೇಪದೆ ಈ ಸಮಸ್ಯೆ ಉಂಟಾಗಿದ್ದರಿಂದ ಇಸಿಜಿ ಪರೀಕ್ಷೆ ನಡೆಸಿದಾಗ ಕಾಯಿಲೆ ಪತ್ತೆಯಾಗಿತ್ತು. ವೋಲ್ಫ್ ಪಾರ್ಕಿನ್ಸನ್ ವೈಟ್ ಸಿಂಡ್ರೋಮ್ (ಡಬ್ಲ್ಯೂಪಿಡಬ್ಲ್ಯೂ) ಹೆಸರಿನ ಈ ಕಾಯಿಲೆ 20-40ರ ವಯಸ್ಸಿನವರಲ್ಲಿ ಕಾಣಿಸಿಕೊಳ್ಳುತ್ತದೆ. ಸಾಮಾನ್ಯವಾಗಿ ಸಾವಿರ ಜನರಲ್ಲಿ ಒಬ್ಬರಿಗೆ ಡಬ್ಲ್ಯೂಪಿಡಬ್ಲ್ಯೂ ಲಕ್ಷಣ ಗೋಚರಿಸುತ್ತದೆ. 1 ಗಂಟೆಯ ಅತ್ಯಾಧುನಿಕ ಶಸ್ತ್ರಚಿಕಿತ್ಸೆ ನಂತರ ಹೃದಯ ತೊಂದರೆಮುಕ್ತವಾಗಿ ಕಾರ್ಯನಿರ್ವಹಿಸುತ್ತಿದೆ ಎಂದು ಚಿಕಿತ್ಸೆ ನೇತೃತ್ವ ವಹಿಸಿದ್ದ ಹೃದ್ರೋಗ ತಜ್ಞ ಡಾ. ಜಯಕೀರ್ತಿ ವೈ.ರಾವ್ ತಿಳಿಸಿದರು.




ಹೃದಯದ ಶಾರ್ಟ್ ಸರ್ಕ್ಯೂಟ್‌ಗೆ ಚಿಕಿತ್ಸೆ ನೀಡಿದ ವೈದ್ಯರನ್ನು ಅಭಿನಂದಿಸುತ್ತಿರುವ ಕೆ. ಆರ್. ಚೌಧರಿ (ಮಧ್ಯದಲ್ಲಿ ಇರುವವರು).

**ಶಾರ್ಟ್ ಸರ್ಕ್ಯೂಟ್:** ಆರೋಗ್ಯವಂತ ಮನುಷ್ಯನ ಹೃದಯ ಬಡಿತ ಪ್ರತಿ ನಿಮಿಷಕ್ಕೆ 50-100ರವರೆಗೆ ಇರುತ್ತದೆ. ಮನುಷ್ಯನ ಹೃದಯ ಬಡಿತದ ಗರಿಷ್ಠ ಮಟ್ಟವನ್ನು ಅಳೆಯಲು ವೈದ್ಯರು ಸೂತ್ರವೊಂದನ್ನು ಅನುಸರಿಸುತ್ತಾರೆ. ಇದರ ಪ್ರಕಾರ 220ರಲ್ಲಿ ವ್ಯಕ್ತಿಯ ವಯಸ್ಸನ್ನು ಕಳೆದರೆ ಲಭ್ಯವಾಗುವ ಸಂಖ್ಯೆಯೇ ಆ ವ್ಯಕ್ತಿಯ ಹೃದಯದ ಗರಿಷ್ಠಮಟ್ಟ. ಉದಾಹರಣೆಗೆ 25 ವರ್ಷದ ವ್ಯಕ್ತಿಯಾಗಿದ್ದರೆ, 220-20=195. ಆತನ ಹೃದಯ ಬಡಿತದ ಗರಿಷ್ಠಮಟ್ಟ 195 ಆಗಿರುತ್ತದೆ. ಇದಕ್ಕಿಂತಲೂ ವೇಗದಲ್ಲಿ ಹೃದಯ ಬಡಿತ ಕಾಣಿಸಿಕೊಂಡರೆ ಅದನ್ನು ಹೃದಯದ ಶಾರ್ಟ್ ಸರ್ಕ್ಯೂಟ್ ಎನ್ನಲಾಗುತ್ತದೆ.

ಈ ಅವಸ್ಥೆ ಕಾಣಿಸಿಕೊಂಡಾಗ ಉಸಿರಾಡಲು ತೊಂದರೆ, ಪ್ರಜ್ಞಾಹೀನರಾಗಬಹುದು. ಆಸ್ಪತ್ರೆಗೆ ಕರೆತಂದಾಗ ಚೌಧರಿ ಹೃದಯದ ಬಡಿತ ಸರಿಸುಮಾರು 300ರಷ್ಟಿತ್ತು.

### ದಕ್ಷಿಣ ಏಷ್ಯಾದಲ್ಲೇ ಪ್ರಪ್ರಥಮ

ಶಾರ್ಟ್ ಸರ್ಕ್ಯೂಟ್ ನಿವಾರಿಸುವ ವರ್ಕ್‌ಮೇಟ್ ಕ್ಲಾರೀಸ್ ಆಂಪಿಯರ್ ಆರ್ ಎಫ್ ಜನರೇಟರ್ (ರೇಡಿಯೋ ತರಂಗಾಂತರ ಉತ್ಪಾದಕ) ಯಂತ್ರವನ್ನು ಜಾಗತಿಕ ಮಟ್ಟದಲ್ಲೇ ಅತ್ಯುತ್ತಮ ಚಿಕಿತ್ಸಾ ವಿಧಾನವೆಂದು ಭಾವಿಸಲಾಗಿದೆ. ಎಲೆಕ್ಟ್ರೋಫಿಸಿಯಾಲಜಿ ವಿಭಾಗದಲ್ಲಿ ಇಂಥ ಅತ್ಯಾಧುನಿಕ ಸೌಲಭ್ಯ ಹೊಂದಿರುವ ದಕ್ಷಿಣ ಏಷ್ಯಾದ ಮೊದಲನೇ ಆಸ್ಪತ್ರೆ ಫೋರ್ಟಿಸ್. ಈ ಅತ್ಯಾಧುನಿಕ ರೇಡಿಯೋ ತರಂಗಾಂತರ ಉತ್ಪಾದಕ ಯಂತ್ರದ ಮೂಲಕ ಗುಣಪಡಿಸಲಾದ ದಕ್ಷಿಣ ಏಷ್ಯಾದಲ್ಲಿನ ಮೊದಲ ವ್ಯಕ್ತಿ ಎಂಬ ಹೆಗ್ಗಳಿಕೆಗೆ ಚೌಧರಿ ಪಾತ್ರರಾಗಿದ್ದಾರೆ. ತೊಡೆ ಸಂಧಿಯಲ್ಲಿ ಸೂಜಿಗಾತ್ರದ ರಂಧ್ರ ಮಾಡಿ, ಆ ಮೂಲಕ ಹೃದಯಕ್ಕೆ ಆಪ್ಟಿಕ್ ಫೈಬರ್ ಹಾಯಿಸಿದ ವೈದ್ಯರು ಹೃದಯ ಬಡಿತವನ್ನು ಏರಿಳಿತ ಮಾಡುವ ಮೂಲಕ ಸಮಸ್ಯೆಯ ನಿರ್ದಿಷ್ಟ ಸ್ಥಳ ಪತ್ತೆ ಹಚ್ಚಿದ್ದಾರೆ. ತೊಂದರೆಯಿರುವ ಸ್ಥಳಕ್ಕೆ ತರಂಗಾಂತರ ಹಾಯಿಸಿ ಶಾರ್ಟ್ ಸರ್ಕ್ಯೂಟ್ ಸರಿಪಡಿಸಿದ್ದಾರೆ.